**DECEMBER 30, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಪ್ರಧಾನಮಂತ್ರಿಯವರ 'ಮನ್ ಕಿ ಬಾತ್': ಸ್ಥಳೀಯ ಕ್ರೀಡೆ ಮತ್ತು ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು, ಕರೆ.**
- **ಹುಬ್ಬಳ್ಳಿಯಲ್ಲಿ ಗೆಡ್ಡೆ ಗೆಣಸು ಬೆಳೆಸುವ ತರಬೇತಿ ಕಾರ್ಯಾಗಾರ; ನೂರಾರು ರೈತರು ಭಾಗಿ.**
- **ಕರ್ನಾಟಕ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ, ಅಪಘಾತ ಪರಿಹಾರ ಯೋಜನೆ, ಜಾರಿಗೆ.**
- **ವಿಶ್ವ ಶ್ರೇಷ್ಠ ಕ್ರಿಕೆಟರ್, ಕಿರ್ಮಾನಿ ಅವರ ಆತ್ಮಕಥೆ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಲೋಕಾರ್ಪಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಕಾಶವಾಣಿಯ 'ಮನ್ ಕಿ ಬಾತ್'ನ, 117ನೇ ಆವೃತ್ತಿಯಲ್ಲಿ, ಛತ್ತೀಸ್‌ಗಢದ 'ಬಸ್ತರ್ ಒಲಿಂಪಿಕ್ಸ್' ಬಗ್ಗೆ ವಿಶೇಷವಾಗಿ ಉಲ್ಲೇಖಿಸಿದರು. ಸ್ಥಳೀಯ ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವಂತೆ, ಕ್ರೀಡಾ ಕ್ಷೇತ್ರದ ಯಶೋಗಾಥೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುವಂತೆ, ಮನದ ಮಾತಿನ ಕೇಳುಗರಲ್ಲಿ, ಅವರು ಕೋರಿದರು.**

<><><>

**1. ಪ್ರಧಾನಮಂತ್ರಿ ಮೋದಿ (ಬಸ್ತರ್ ಒಲಿಂಪಿಕ್ಸ್) ಧ್ವನಿ 50 ಸೆಕೆಂದುಗಳು**

<><><>

**ಪ್ರಧಾನಮಂತ್ರಿಯವರ 'ಮನದ ಮಾತು' ಆಲಿಸಿರುವ, ಬೆಂಗಳೂರಿನ ಹಿರಿಯ ಕ್ರೀಡಾ ಪತ್ರಕರ್ತ, ಗಿರೀಶ ದೊಡ್ಡಮನಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.**

<><><>

**2. ಕ್ರೀಡಾ ಪತ್ರಕರ್ತ ಗಿರೀಶ (ಬಸ್ತರ್ ಒಲಿಂಪಿಕ್ಸ್) ಧ್ವನಿ 50 ಸೆಕೆಂದುಗಳು**

<><><>

ಆಟೋ ರಿಕ್ಷಾ ಚಾಲಕರು ಸೇರಿದಂತೆ, ಖಾಸಗಿ ವಾಣಿಜ್ಯ ಸಾರಿಗೆ ವಲಯದ ಕಾರ್ಮಿಕರಿಗೆ ಅನುಕೂಲವಾಗುವಂತೆ, 'ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ' ರೂಪಿಸಲಾಗಿದೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ 'ಎಕ್ಸ್' ನಲ್ಲಿ ಈ ವಿಷಯ ತಿಳಿಸಿರುವ ಸಚಿವರು, ಈ ಯೋಜನೆಯ ಸದುಪಯೋಗವನ್ನು, ಖಾಸಗಿ ಸಾರಿಗೆ ವಲಯದ ಎಲ್ಲ ಅರ್ಹ ಶ್ರಮಿಕರು ಪಡೆದುಕೊಳ್ಳಬೇಕೆಂದು, ಮನವಿ ಮಾಡಿದ್ದಾರೆ.

<><><>

ಅಸಂಘಟಿತ ವಲಯದ ಕಾರ್ಮಿಕರಿಗೆ ಮೀಸಲಿರುವ, ಕೇಂದ್ರ ಸರ್ಕಾರದ ಯೋಜನೆಗಳ ಕುರಿತು, ಇಂದು ಮಧ್ಯಾಹ್ನ 1.30ಕ್ಕೆ ಆಕಾಶವಾಣಿ ಬೆಂಗಳೂರು ಕೇಂದ್ರದಿಂದ, ಸಂವಾದ ಕಾರ್ಯಕ್ರಮ ಪ್ರಸಾರವಾಗಲಿದೆ.

<><><>

ಕೆರೆಗಳನ್ನು ತುಂಬಿಸುವುದು, ನದಿಗಳಿಗೆ ಚೆಕ್ ಡ್ಯಾಮ್, ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಹಾಗೂ ಏತ ನೀರಾವರಿ ಯೋಜನೆಗಳಿಂದ, ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲೂಕಿನ ವಿವಿಧೆಡೆ, ಅಂತರ್ಜಲ ಮಟ್ಟದಲ್ಲಿ ಗಣನೀಯ ಏರಿಕೆಯಾಗಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್.ಬೋಸರಾಜು ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ, ಸಚಿವರು ಈ ವಿಷಯ ಪ್ರಕಟಿಸಿದ್ದಾರೆ. ಅಂತರ್ಜಲ ಮಟ್ಟವನ್ನು ಕಾಪಿಟ್ಟು, ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿ, ರೈತರ ಬೆಳೆಗಳಿಗೆ ನೀರೊದಗಿಸುವ ಉದ್ದೇಶದಿಂದ, ಕೆರೆಗಳನ್ನು ತುಂಬಿಸಲು ಆದ್ಯತೆ ನೀಡಲಾಗಿದೆ. ರೈತರ ಆದಾಯ ಹೆಚ್ಚಿಸಲು ತಮ್ಮ ಸರ್ಕಾರ ಬದ್ಧವಾಗಿದೆ, ಎಂದಿದ್ದಾರೆ.

<><><>

ಈಗ ಜಾಹಿರಾತು..

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(10 ಸೆಕೆಂಡುಗಳು ದಿನದರ್ಶಿಕೆ)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಕೊಲ್ಕೊತ್ತಾದ ಕ್ರಾಪ್ಸ್ ಫೋರ್ ಎಚ್.ಡಿ. ಹಾಗೂ ಮೈಸೂರಿನ ಸಹಜ ಸಮೃದ್ಧ, ಧಾರವಾಡ ಜಿಲ್ಲೆ ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ, ಮೂಜಗಂ ಸಭಾಭವನದಲ್ಲಿ ಆಯೋಜಿಸಿದ್ದ, ಗೆಡ್ಡೆ ಗೆಣಸು ಮೇಳ ಹಾಗೂ ರೈತರಿಗೆ ತರಬೇತಿ ಕಾರ್ಯಾಗಾರ ಯಶಸ್ವಿಯಾಗಿ ಜರುಗಿತು.

**<><><>**

ಈ ಕುರಿತು ಒಂದು ವರದಿ, ಧಾರವಾಡ ಆಕಾಶವಾಣಿಯ, ಪ್ರಾದೇಶಿಕ ಸುದ್ದಿ ವಿಭಾಗದ, ಸಂಪಾದಕೀಯ ಕಾರ್ಯನಿರ್ವಾಹಕ ವಿವೇಕಾದಿತ್ಯ ಕನಿಯಾಲ್ ಅವರಿಂದ...

**<><><>**

*ಗೆಡ್ಡೆ ಗೆಣಸಿನ ವೈವಿಧ್ಯ, ಸಾಗುವಳಿ ವಿಧಾನಗಳು, ಮೌಲ್ಯವರ್ಧನೆಯ ಅವಕಾಶಗಳು ಮತ್ತು ಮಾರುಕಟ್ಟೆಯ ಸಾಧ್ಯತೆಗಳ ಬಗ್ಗೆ ಆಸಕ್ತರಿಗೆ ಮಾಹಿತಿ ನೀಡಲಾಯಿತು.*

*ಗೆಡ್ಡೆ ಗೆಣಸು ಬೆಳೆದು ಯಶಸ್ವಿಯಾದ ರೈತರೊಂದಿಗೆ ಸಂವಾದ ಕಾರ್ಯಕ್ರಮ ಮೇಳದಲ್ಲಿ ಗಮನ ಸೆಳೆಯಿತು.*

*ವಿಜಯನಗರ ಜಿಲ್ಲೆ ಹೂವಿನ ಹಡಗಲಿ ತಾಲೂಕು, ಉತ್ತಂಗಿ ಗ್ರಾಮದ ಪ್ರಗತಿಪರ ರೈತ ಕಲ್ಲಪ್ಪ ಕಾಟ್ರಳ್ಳಿ, ಈ ಮೇಳದಲ್ಲಿ ಪಾಲ್ಗೊಂಡಿದ್ದರು. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.*

<><><>

**ಹೂವಿನ ಹಡಗಲಿ ರೈತ ಕಲ್ಲಪ್ಪ ಕಾಟ್ರಳ್ಳಿ ಧ್ವನಿ 22 (47) ಸೆಕೆಂದುಗಳು**

<><><>

**ಪೇಜಾವರ ಮಠಾಧೀಶರಾಗಿದ್ದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಅವರು, ಗಂಧದ ಕೊರಡಿನಂತೆ ತಾವು ತೇಯ್ದು, ನಾಡಿಗೆ ಸುಗಂಧ ಹರಡಿದರು ಎಂದು, ಉಡುಪಿ ಪೇಜಾವರ ಮಠಾಧೀಶ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಸ್ಮರಿಸಿದ್ದಾರೆ.ಪೇಜಾವರ ವಿಶ್ವೇಶತೀರ್ಥ ಶ್ರೀಪಾದರ ಐದನೇ ಪುಣ್ಯ ತಿಥಿ ಹಿನ್ನೆಲೆ, ಮಂಗಳೂರಿನಲ್ಲಿ ಆಯೋಜಿಸಿದ್ದ 'ಪೇಜಾವರ ವಿಶ್ವೇಶತೀರ್ಥ ನಮನ' ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಅವರು 8ನೇ ವಯಸ್ಸಿಗೆ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ತಮ್ಮ ಜೀವಮಾನವಿಡೀ ಧಾರ್ಮಿಕ, ಶಿಕ್ಷಣ, ಆರೋಗ್ಯ, ಕಲೆ ಸೇರಿದಂತೆ ಎಲ್ಲ ಕ್ಷೇತ್ರಗಳಿಗೆ ಪ್ರೋತ್ಸಾಹ ನೀಡಿದರು. 'ವಸುಧೈವ ಕುಟುಂಬಕಂ' ಧ್ಯೇಯವನ್ನು ಜೀವನವ್ರತವಾಗಿ ಪಾಲಿಸಿದರು, ಎಂದರು.**

<><><>

**ವಿಶ್ವ ಶ್ರೇಷ್ಠ ಕ್ರಿಕೆಟರ್, ಸಯ್ಯದ್ ಮುಜತಬಾ ಹುಸೇನ್ ಕಿರ್ಮಾನಿ ಅವರು, ಕೇವಲ ಕ್ರಿಕೆಟ್ ಪ್ರತಿಭೆಯ ಷ್ಟೇ ಅಲ್ಲ; ಅತ್ಯುತ್ತಮ ವ್ಯಕ್ತಿತ್ವವುಳ್ಳವರು. ಕರ್ನಾಟಕವನ್ನು ಪ್ರತಿನಿಧಿಸುವ ಕ್ರೀಡಾಪಟುವಾಗಿ, ಭಾರತೀಯ ಕ್ರಿಕೆಟ್‌ಗೆ ಅಮೂಲ್ಯ ಕೊಡುಗೆ ನೀಡಿದವರು ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಶ್ಲಾಘಿಸಿದ್ದಾರೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, 75 ವರ್ಷ ಪೂರ್ಣಗೊಳಿಸಿದ ಕಿರ್ಮಾನಿ, ಅವರ ಆತ್ಮಚರಿತ್ರೆ, ಕ್ರಿಕೆಟ್ ಪ್ರಯಾಣದ ಹೇಳಲಾಗದ ಕಥೆಗಳ, 'ಸ್ಟಂಪ್ಡ್ – ಲೈಫ್ ಬಿಯಾಂಡ್ ಆಂಡ್ ಬಿಯಾಂಡ್ ದಿ ಟ್ವೆಂಟಿ ಟು ಯಾರ್ಡ್ಸ್' ಬಿಡುಗಡೆ ಕಾರ್ಯಕ್ರಮದಲ್ಲಿ, ಮಾತನಾಡಿದರು. ಹಿರಿಯ ಕ್ರಿಕೆಟಿಗ ಕಪಿಲ್ ದೇವ್, ಬ್ರಿಜೇಶ್ ಪಟೇಲ, ಅನಿಲ ಕುಂಬ್ಳೆ, ರಾಹುಲ್ ದ್ರಾವಿಡ್, ವಿವಿಎಸ್ ಲಕ್ಷ್ಮಣ ಹಾಗೂ ಇನ್ಫೋಸಿಸ್‌ನ ನಾರಾಯಣ ಮೂರ್ತಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.**

<><><>

**ಜಮ್ಮು ಕಾಶ್ಮೀರದಲ್ಲಿ ಕಳೆದ ವಾರ ಕಂದಕಕ್ಕೆ ಉರುಳಿದ, ಸೇನಾ ವಾಹನ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ, ಕೊಡಗು ಜಿಲ್ಲೆ, ಆಲೂರು ಸಿದ್ದಾಪುರ ಗ್ರಾಮದ ಸೈನಿಕ, 28 ವ ರ್ಷದ ಧಿವಿನ್ ಚಿಕಿತ್ಸೆ ಫಲಿಸದೇ, ಶ್ರೀನಗರದ ಸೇನಾ ಆಸ್ಪತ್ರೆಯಲ್ಲಿ ನಿನ್ನೆ ಸಾವನ್ನಪ್ಪಿದ್ದಾರೆ. 10 ವರ್ಷಗಳ ಹಿಂದೆ ಸೇನೆಗೆ ಆಯ್ಕೆಯಾಗಿದ್ದ ಅವರು, ತಮ್ಮ ತಂದೆ–ತಾಯಿಗೆ ಏಕೈಕ ಸುಪುತ್ರ.**

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಉಣಕಲ್ ಬಳಿಯ, ಅಚ್ಚವ್ವನ ಕಾಲೋನಿಯಲ್ಲಿ, ಎಲ್.ಪಿ.ಜಿ. ಅಡುಗೆ ಅನಿಲ ಸೋರಿಕೆಯಿಂದ ಸಂಭವಿಸಿದ, ಬೆಂಕಿ ಅವಘಡದಲ್ಲಿ, ಚಿಕಿತ್ಸೆ ಫಲಕಾರಿಯಾಗದೇ, ಹುಬ್ಬಳ್ಳಿಯ ಕೆ.ಎಂ.ಸಿ. ಆರ್.ಐ. ನಲ್ಲಿ ನಿನ್ನೆ ಮತ್ತೆ ಇಬ್ಬರು ಅಸುನೀಗಿದ್ದಾರೆ. ಗಾಯಗೊಂಡ ಒಂಬತ್ತು ಜನರ ಪೈಕಿ, ಮೃತಪಟ್ಟವರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ. ಗಾಯಗೊಂಡಿರುವ ಮೂವರು ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳಿಗೆ ಚಿಕಿತ್ಸೆ ಮುಂದುವರೆದಿದೆ. ಆ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದ್ದು, ಓರ್ವರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು, ಕೆ.ಎಂ.ಸಿ. ನಿರ್ದೇಶಕ ಡಾಕ್ಟರ್ ಎಸ್.ಎಫ್. ಕಮ್ಮಾರ ತಿಳಿಸಿದ್ದಾರೆ.

<><><>

ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರ ನಿಧನದ ಹಿನ್ನೆಲೆ, ರಾಜ್ಯ ಸರ್ಕಾರ 7 ದಿನ ಶೋಕಾಚಾರಣೆ ಘೋಷಿಸಿದ್ದು, ಕಾನೂನು ಪರಿಮಿತಿಯಲ್ಲಿ ಹೊಸ ವರ್ಷಾಚರಣೆ ಮಾಡಲು, ಅವಕಾಶ ನೀಡಲಾಗಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನಾದ್ಯಂತ 10 ಸಾವಿರಕ್ಕೂ ಹೆಚ್ಚು ಕ್ಯಾಮೆರಾ ಅಳವಡಿಸಲಾಗಿದ್ದು, ಹೊಸ ವ ರ್ಷಾಚರಣೆ ವೇಳೆ, ರಾಜ್ಯದ ಘನತೆ, ಗೌರವ ಹಾಗೂ ಸಾರ್ವಜನಿಕ ಶಿಸ್ತು ಕಾಪಾಡುವಂತೆ ಕೋರಿದರು. ಕಾನೂನು, ಸುವ್ಯವಸ್ಥೆ ಉಲ್ಲಂಘಿಸಿದಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು, ಅವರು ಸ್ಪಷ್ಟ ಪಡಿಸಿದರು.

<><><>

ರಾಷ್ಟ್ರಕವಿ ಕುವೆಂಪು ಅವರ, 120ನೇ ಜನ್ಮ ದಿನದ ಹಿನ್ನೆಲೆ, ವಿಶ್ವ ಮಾನವ ಸಂದೇಶ ಸಾರಿದ ಕವಿಗೆ, ಅನೇಕ ಗಣ್ಯರು ಗೌರವಾರ್ಪಿಸಿದರು. ರಾಜ್ಯದ ಹಲವೆಡೆ ಸರಳವಾಗಿ ರಾಷ್ಟ್ರಕವಿ ಜಯಂತಿ ಆಚರಿಸಿದ ವರದಿಗಳು ಬಂದಿವೆ.

<><><>

ಕರ್ನಾಟಕ, ಗೋವಾ ಎನ್.ಸಿ.ಸಿ. ನಿರ್ದೇಶನಾಲಯದ ಪ್ರತಿನಿಧಿಯಾಗಿ, ಕೋಲಾರದ ಯುವ ಗಾಯಕಿ ಶ್ರುತಿ ಕೆ.ಎಂ. ಹೊಸ ದಿಲ್ಲಿಯ ಗಣರಾಜ್ಯೋತ್ಸವ ಶಿಬಿರಕ್ಕೆ ಆಯ್ಕೆಯಾಗಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪ್ರಧಾನಮಂತ್ರಿಯವರ 'ಮನ್ ಕಿ ಬಾತ್'; ಸ್ಥಳೀಯ ಕ್ರೀಡೆ ಮತ್ತು ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು, ಕರೆ.
- ಹುಬ್ಬಳ್ಳಿಯಲ್ಲಿ ಗೆಡ್ಡೆ ಗೆಣಸು ಬೆಳೆಸುವ ತರಬೇತಿ ಕಾರ್ಯಾಗಾರ; ನೂರಾರು ರೈತರು ಭಾಗಿ.
- ಕರ್ನಾಟಕ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ, ಅಪಘಾತ ಪರಿಹಾರ ಯೋಜನೆ, ಜಾರಿಗೆ.
- ವಿಶ್ವ ಶ್ರೇಷ್ಠ ಕ್ರಿಕೆಟರ್, ಕಿರ್ಮಾನಿ ಅವರ ಆತ್ಮಕಥೆ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಲೋಕಾರ್ಪಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>